ಕೇಳಿದ್ದೆ. ಇದೇ ಪ್ರಶ್ನೆಯನ್ನು. ಅವಳ ಉತ್ತರದಿಂದ ನನ್ನೆದೆಯೇ ಒಡೆದು ಹೋಗಬಹುದೆಂದುಕೊಂಡಿದ್ದೆ. ಕೇಳಬಾರದ್ದನ್ನು ಕೇಳಿಬಿಟ್ಟಿದ್ದೆ. ಅವಳೇನೇ ಹೇಳಿದ್ದರೂ ನನಗದು ಅಪಮಾನಕಾರಿಯೂ ಅವಹೇಳನವೂ ಆಗಿಬಿಡುವ ಎಲ್ಲ ಸಂಭವವಿತ್ತು. ಆದರೆ ಅವಳಂತಹುದನ್ನು ಹೇಳಲೇ ಇಲ್ಲ. ಕೇವಲ ಇಷ್ಟು ಮಾತ್ರ ಹೇಳಿದಳು, "ತಗ್ಗಿನ ಕಡೆ ತಾನೆ ನೀರು ಹರಿಯುವುದು" ಎಂದು! ನನಗಾಗಳಿಗೆ ಆದ ಸಮಾಧಾನವನ್ನು ಹೇಳಲು ಯಾವುದೇ ಪದಗಳಿಲ್ಲ.

ಯಾವಾಗ ನಿದ್ದೆಗೆ ಜಾರಿದೆನೋ ಗೊತ್ತಿಲ್ಲ. ಎದ್ದು ಮುಖಕ್ಕೆ ನೀರೆರೆಚಿಕೊಳ್ಳುವಷ್ಟರಲ್ಲಿ ಹಬೆಯಾಡುವ ಚಹಾ ಹಿಡಿದು ಕೊಠಡಿಗೇ ಬಂದಳು. ಎದುರೆದುರು ಕುಳಿತು ಚಹಾ ಹೀರುತ್ತಿರುವಾಗಲೇ ಕೇಳಿಬಿಟ್ಟೆ. "ಸುಶೀ, ನನ್ನ ಪ್ರಶ್ನೆಗೆ ಈ ದಿನ ನೀನು ನೇರವಾದ ಉತ್ತರ ಕೊಡಬೇಕು, ಅದನ್ನು ತಿಳಕೊಳ್ಳುವ ಹಕ್ಕು ನನಗಿದೆಯೆಂದು ಭಾವಿಸಿರುವೆ. ನೀನು ನನ್ನನ್ನು ಬದಿಗಿಟ್ಟು ಆ ದರ್ಜಿಯ ಹಿಂದೆ ಓಡಿಹೋದದ್ದರ ಔಚಿತ್ಯವಾದರೂ ಏನಿತ್ತು? ನನಗೆ ತಿಳಿದಿರುವಂತೆ ನಮ್ಮಿಬ್ಬರ ದಾಂಪತ್ಯ ಸುಂದರವಾಗಿತ್ತು. ನೀನೂ ಸಂತುಷ್ಟಳಾಗಿದ್ದೆ..." ಇನ್ನೂ ಮಾತಾಡುವಷ್ಟರಲ್ಲಿ ದಿಗ್ಗನೆ ಎದ್ದು ನನ್ನ ಕಾಲ ಬಳಿ ಕೆಡೆದು ನನ್ನ ಮಂಡಿಗಳ ಮೇಲೆ ತಲೆ ಇಟ್ಟು ತೊಡೆಗಳನ್ನು ಬಳಸುತ್ತಾ, "ಅಯ್ಯೋ ನನ್ನ ದೇವರೆ, ಇದನ್ನು ನೀವು ಕೇಳಲೂ ಬಾರದು. ನಾನು ಹೇಳಲೂ ಬಾರದು. ತುಂಬ ಕ್ಷುಲ್ಲಕವೆನ್ನಿಸಬಹುದು ನಿಮಗೆ. ನಿಮಗೇ ಏನು? ನನಗೂ ಹಾಗೇ ಅನ್ನಿಸುತ್ತದೆ. ಪತಿದೇವರೆಂದರೆ ಅದು ನೀವೊಬ್ಬರೆ, ನಿಮ್ಮಂತಹ ದೇವರಿಗೆ ಅಂಥ ಮೋಸ ಮಾಡಿದ್ದರಿಂದಲೇ ನನಗಿಂಥದ್ದು ಆಗಿದ್ದು" ಎಂದು ಕಣ್ಣೀರು ಹಾಕುತ್ತಾ ಉತ್ಕಟವಾಗಿ ಕಾಲುಗಳನ್ನು ತಬ್ಬಿಕೊಂಡಳು. ನಾನು ಸುಮ್ಮನೆ ಕುಳಿತಿದ್ದೆ. ಇನ್ನೇನೂ ಹೇಳಲು ನನಗೆ ಸಾಧ್ಯವಾಗಲಿಲ್ಲ. ಈ ಎಲ್ಲದರಾಚೆ ಇವಳನ್ನು ಪ್ರೀತಿಸದೆ ಇರಲು ನನಗೆ ಸಾಧ್ಯವಾಗಲಿಲ್ಲ. "ಇರಲಿ ಹೇಳು. ಎಂಥದ್ದನ್ನೋ ತಡಕೊಂಡಾಗಿದೆ ಇನ್ನು ಹೆಚ್ಚೇನು ಹೇಳಿಬಿಡುತ್ತೀಯ ನಾನು ಅಂದುಕೊಂಡದ್ದಕ್ಕಿಂತ" ಎಂದೆ ಶಾಂತವಾಗಿ.

ನನ್ನಿಂದ ಅನತಿ ದೂರ ಸರಿದು ಸೆರಗಿನಲ್ಲಿ ಕಣ್ಣು ಮೂಗೊರೆಸಿಕೊಂಡು, "ನಿಮಗೆ ಜ್ಞಾಪಕವಿದೆಯಲ್ಲವೆ? ನನ್ನ ತಂಗಿ ಪಾರ್ವತಿಯ ಮದುವೆ... ಆ ಮದುವೆಗಾಗಿ ನೀವು ನನಗೊಂದು ಚೆಂದದ ರೇಶ್ಮೆ ಸೀರೆ ಕೊಡಿಸಿದ್ದೀರಿ. ಅಮ್ಮ ಇನ್ನೊಂದು... ಎರಡೂ ಸೀರೆಗಳಿಗೆ ಚೆಂದದ ರವಿಕೆ ಹೊಲೆಸಬೇಕಿತ್ತು. ಅವನ ಅಂಗಡಿ ಮನೆಯೆದುರಿಗೇ ಇತ್ತು. ಅಲ್ಲಿ ಬಹಳಷ್ಟು ಜನ ಬರ ಹೋಗುತ್ತಿದ್ದುದ್ದನ್ನು ನಾನೂ ನೋಡಿದ್ದೆ. ಅವನಲ್ಲಿಗೆ ಬಂದು ಅಂಗಡಿ ತೆರೆದು ಆರೆಂಟು ತಿಂಗಳಾದರೂ ನಾನಲ್ಲಿಗೆ ಹೋಗಿರಲೇ ಇಲ್ಲ. ಈಗ ರವಿಕೆಗಾಗಿ ಅಲ್ಲಿಗೆ ಹೋದೆ. ಅವನಂಗಡಿಯಲ್ಲಿ ಎರಡು ಮಶೀನುಗಳು ಸದಾ ಕಟಕಟಿಸುತ್ತಾ ಶಬ್ದ ಮಾಡುತ್ತಲೇ ಇರುತ್ತಿದ್ದವು. ಇವನು ಕತ್ತರಿಸಿಟ್ಟ ರವಿಕೆಗಳನ್ನು ಹೊಲೆಯುತ್ತಾ ಇಬ್ಬರು ಹುಡುಗಿಯರು ಅಲ್ಲೇ ಇರುತ್ತಿದ್ದರು. ಇನ್ನೊಂದು ಸಣ್ಣ ಹುಡುಗ ಹುಕ್ಸು, ಕಾಜಾ ಹಾಕುತ್ತಾ ಅಲ್ಲೇ ನೆಲದ ಮೇಲೆ ಕೂರುತ್ತಿದ್ದ ಅಂಗಡಿಯ ಮೂರು ಗೋಡೆಗಳ ಕಪಾಟುಗಳಲ್ಲಿ ಎಲ್ಲೆಂದರಲ್ಲಿ ಯಥೇಚ್ಛವಾಗಿ ಹೊಲಿಸಬೇಕಾದ, ಅಳತೆಗಾಗಿ ಕೊಟ್ಟ ರವಿಕೆಗಳು, ಬಟ್ಟೆಗಳು ತುಂಬಿ ತುಳುಕುತ್ತಿದ್ದವು.

ನಾನಲ್ಲಿಗೆ ಹೋಗಿದ್ದು ನಡುಮಧ್ಯಾಹ್ನ ಮನೆಗೆಲಸ ಅಡಿಗೆ ಎಲ್ಲಾ ಮುಗಿಸಿ ಕುಕ್ಕರಿಟ್ಟು ಆರಿಸಲು ಅಮ್ಮನಿಗೆ ಹೇಳಿ ಹೋಗಿದ್ದೆ. ಮೊದಲು ಅಳತೆ ತೆಗೆಯಬೇಕು. ಬೇರೆಯವರು ಹೊಲೆದ ರವಿಕೆಯ ಮಾದರಿ ಅಳತೆಗೆ ನಾನು ಹೊಲೆಯುವುದಿಲ್ಲ ಎಂದ. ಅಳತೆ ತೆಗೆಯಲು ಪ್ರತ್ಯೇಕವಾದ ಕಿರುಕೋಣೆಯೊಂದಿತ್ತು. ಅದಕ್ಕೊಂದು ಬಟ್ಟೆಯ ತೆರೆ ಇತ್ತು. ತೆರೆ ಸರಿಸಿ ಒಳ ಹೋಗಿ ನಿಂತವಳ